

ಕೆಲಸದವನು: ಸಾರ್, ನಾಳೆಯಿಂದ ನಿಮ್ಮ ಮನೆ ಕೆಲಸಕ್ಕೆ ಬರುವುದಿಲ್ಲ, ಹುಚ್ಚಾಸ್ಪತ್ರೆಯಲ್ಲಿ ಕೆಲಸ ಸಿಕ್ಕಿದೆ.

ಯಜಮಾನ: ಅಲ್ಲಿ ಕೆಲಸ ಮಾಡಲು ನಿನಗೆ ಯಾವ ಅನುಭವವಿದೆ?

ಕೆಲಸದವನು: ಇಲ್ಲಿಯವರಿಗೂ ನಿಮ್ಮಂಥವರ ಮನೆಯಲ್ಲಿಯೇ ಕೆಲಸ ನಿಭಾಯಿಸಿದ್ದೀನಲ್ಲ!

★★★

ನ್ಯಾಯಾಧೀಶ: ಅಲ್ಲಮ್ಮಾ, ನಿನ್ನ ಗಂಡನನ್ನು ಕೊಂದು ಇದು ಆಕಸ್ಮಿಕ ಅಂತ ಇದ್ದೀಯಲ್ಲ.

ಮಹಿಳೆ: ಹೌದು ಸಾರ್, ನಾನು ಕೊಲ್ಲುವುದಕ್ಕೆ ಹೊರಟಿದ್ದು ಅತ್ತೆಯನ್ನು, ಇವರು ಮಧ್ಯೆ ಬಂದುಬಿಟ್ಟರು!

★★★

ಮನೆಯಾಕೆ: ನಾಳೆಯಿಂದ ಕೆಲಸಕ್ಕೆ ಈ ರೀತಿಯೆಲ್ಲ ಅಲಂಕಾರ ಮಾಡಿಕೊಂಡು ಬರಬೇಡಮ್ಮಾ!

ಕೆಲಸದಾಕೆ: ಏಕಮ್ಮಾ?

ಮನೆಯಾಕೆ: ನಮ್ಮವರ ಕಣ್ಣು ಆಪರೇಷನ್ ಆಗಿದೆ!

(ಸಂಗ್ರಹ): **ಶಂಕರೇಗೌಡ ತುಂಬಕೆರೆ, ಮಂಡ್ಯ**

ಮೆಕ್ಯಾನಿಕ್: ಎಂಜಿನ್‌ನಲ್ಲಿ ಡೀಸಲ್ ಇಲ್ಲ, ಒಂದು ಟೈರ್‌ನಲ್ಲಿ ಗಾಳಿ ಇಲ್ಲ, ಬ್ರೇಕ್‌ನಲ್ಲೂ ಪ್ರಾಬ್ಲಮ್ ಇದೆ.

ಕಾರಿನ ಒಡತಿ: ಇವೆಲ್ಲಾ ಇದ್ದಿದ್ದೇ. ಮೊದಲು ಕನ್ನಡಿ ಸರಿ ಮಾಡು!

★★★

ಮೊಬೈಲ್ ಕಂಪೆನಿಯೊಂದರ ಸೇಲ್ಸ್‌ಮೆನ್‌ನ ಹೊಟ್ಟೆ ಕೆಟ್ಟಿತು. ಅವನು ಕೂಡಲೇ ವೈದ್ಯರ ಬಳಿ ಹೋಗಿ ತನ್ನ ಕಷ್ಟವನ್ನು ಹೀಗೆ ಹೇಳಿಕೊಂಡ.

'ಸಾರ್, ಬೆಳಿಗ್ಗೆಯಿಂದ ಅನ್‌ಲಿಮಿಟೆಡ್ ಔಟ್‌ಗೋಯಿಂಗ್ ಆಗ್ತಿದೆ. ಒಳಗಿನಿಂದ ಹೊಸ– ಹೊಸ ರಿಂಗ್ ಟೋನ್ ಕೇಳಿಸುತ್ತಿದೆ. ಹೊಟ್ಟೆಯಲ್ಲಿ ಬ್ಯಾಲೆನ್ಸ್ ಇಲ್ಲ. ಸಣ್ಣಗೆ ರೀಚಾರ್ಜ್ ಮಾಡಿದರೂ ಐದು ನಿಮಿಷದಲ್ಲೇ ಬ್ಯಾಲೆನ್ಸ್ ನಿಲ್ ಆಗುತ್ತೆ. ದಯವಿಟ್ಟು ಈ ಸ್ಕೀಮನ್ನು ಹೇಗಾದರೂ ಮಾಡಿ ನಿಲ್ಲಿಸಿ!'

(ಸಂಗ್ರಹ): **ಡಿ.ಎನ್.ಶ್ರೀನಾಥ್, ಶಿವಮೊಗ್ಗ**

### ಎಚ್ಚರಿಕೆ!

ಕಾಲೇಜಿನ ಆವರಣದಲ್ಲಿ ಸಂಚಾರಿ ಸೂಚನಾ ಫಲಕವೊಂದನ್ನು ಅಳವಡಿಸಲು ವಿದ್ಯಾರ್ಥಿಯೊಬ್ಬನಿಗೆ ತಿಳಿಸಲಾಯಿತು. ಅವನು ಬರೆಸಿದ ಬೋರ್ಡ್ ಹೀಗಿತ್ತು– 'ನಿಧಾನವಾಗಿ ಚಲಿಸಿ. ವಿದ್ಯಾರ್ಥಿಗಳನ್ನು ಸಾಯಿಸಬೇಡಿ, ಉಪನ್ಯಾಸಕರು ಬರುವವರೆಗೆ ಕಾಯಿರಿ!'

★★★

### ತಂದೆಯ ವಯಸ್ಸು

ಟೀಚರ್: ಸೋನು, ನಿನ್ನ ತಂದೆಯ ವಯಸ್ಸೆಷ್ಟು?

ಸೋನು: ಮೇಡಂ ಅಪ್ಪನಿಗೂ ನನ್ನಷ್ಟೆ ವಯಸ್ಸು.

ಟೀಚರ್: ಅದು ಹೇಗೆ ಸಾಧ್ಯ?

ಸೋನು: ನಾನು ಹುಟ್ಟಿದ ಮೇಲೆ ತಾನೆ ಅವರು ಅಪ್ಪ ಆಗಿದ್ದು!

★★★

### ನನ್ನನ್ನೂ ಕರೀಲಿಲ್ಲ!

ಒಬ್ಬಾತ: ಅಲ್ವೋ ನಿನ್ನ ಮಗನ ಮದುವೆಯಾಯ್ತಂತೆ. ಇಷ್ಟು ಹಳೆ ಸ್ನೇಹಿತನಾಗಿ ನನ್ನನ್ನ ಕರೀಲೇ ಇಲ್ವಲ್ಲ.

ಸ್ನೇಹಿತ: ಬೇಜಾರು ಮಾಡ್ಕೊಬೇಡ್ವೋ. ಅವನು ನನ್ನನ್ನೂ ಕರೀಲಿಲ್ಲ!

★★★



### ಮೂರು ವರಗಳು

ಒಬ್ಬ ಕುಡುಕ ದೇವರನ್ನು ಕುರಿತು ತಪಸ್ಸು ಮಾಡಿದ. ಅವನ ಭಕ್ತಿಗೆ ಮೆಚ್ಚಿದ ದೇವರು ಪ್ರತ್ಯಕ್ಷನಾಗಿ ಮೂರು ವರಗಳನ್ನು ಕೊಡುವುದಾಗಿ ಹೇಳಿದ. ಕುಡುಕ ಹೇಳಿದ 'ಎಂದೂ ಖಾಲಿಯಾಗದ ಒಂದು ವಿಸ್ಕಿ ಬಾಟಲನ್ನು ಕೊಡು.'

ಅವನ ಮುಂದೆ ಅಂತಹ ಒಂದು ಬಾಟಲ್ ಬಂತು. ಕುಡುಕ ಅದನ್ನು ಖಾಲಿ ಮಾಡಿದ ಹಾಗೆಲ್ಲಾ ಅದು ಭರ್ತಿಯಾಗುತ್ತಿತ್ತು. ಇನ್ನೆರಡು ವರ ಕೊಡಲು ಕಾಯುತ್ತಿದ್ದ ದೇವರು ಇನ್ನೇನು ಬೇಕು ಎಂದು ಕೇಳಿದಾಗ ಕುಡುಕ ಹೇಳಿದ 'ಇಂತಹ ಇನ್ನೆರಡು ಬಾಟಲುಗಳನ್ನು ಕೊಡು!'

**–ಕೆ.ಪಿ. ಸತ್ಯನಾರಾಯಣ, ಹಾಸನ**